# ನಿರ್ದೇಶಕನೂ ಆಗಬೇಕು

ರಕ್ಷಿತ್ ಎನ್.

**ಕಲರ್ಸ್ ಕನ್ನಡದ 'ಪದ್ಮಾವತಿ'ಯ ವಿಕ್ರಂ**

★ *ಸ್ಮೈಲ್‌ಗುರು ವಿಶೇಷಣ ಹೇಗೆ ಬಂತು?*

ನಾನು 'ಸ್ಮೈಲ್‌ಗುರು' ಎಂಬ ಕಿರುಚಿತ್ರವೊಂದನ್ನು ಮಾಡಿದೆ. ಬಹುತೇಕ ಮಾಧ್ಯಮಗಳು ಸಿನಿಮಾ ಪರಿಚಯಿಸುವಾಗ ನನ್ನ ಹೆಸರನ್ನು 'ಸ್ಮೈಲ್‌ಗುರು ವಿಕ್ರಂ' ಎಂದು ಹೇಳಿದವು. ಅದು ಹಾಗೆಯೇ ರೂಢಿಯಾಯಿತು. ಸಿನಿಮಾ ಇನ್ನೂ ಬಿಡುಗಡೆಯೇ ಆಗಿಲ್ಲ, ಆಗಲೇ ಅಷ್ಟು ಪ್ರಚಾರವೇ? ಎಂದು ಅನ್ನಿಸಬಹುದು. ಅದಕ್ಕೆಲ್ಲಾ ಕಾರಣ ಆಗಿದ್ದು ನನ್ನ ಕಿರುಚಿತ್ರದಲ್ಲಿದ್ದ ಹೊಸತನ. ಕಿರುಚಿತ್ರ ಒಂದಕ್ಕೆ ಅದ್ದೂರಿಯಾಗಿ ಮುಹೂರ್ತ ಮಾಡಿದ್ದು ಅದೇ ಮೊದಲು ಎಂದು ಕಾಣುತ್ತದೆ. ಶಿವರಾಜ್‌ಕುಮಾರ್ ಆ ಕಾರ್ಯಕ್ರಮಕ್ಕೆ ಬಂದಿದ್ದು ಮತ್ತೊಂದು ವಿಶೇಷ. ಎಲ್ಲದಕ್ಕಿಂತ ಮುಖ್ಯವಾದ ಒಂದು ಸಂಗತಿ ಏನೆಂದರೆ ಸ್ಟಾಪ್ ಮೋಷನ್ ಗ್ರಾಫಿಕ್ ತಂತ್ರಜ್ಞಾನವನ್ನು ಆ ಚಿತ್ರ ನಿರ್ಮಾಣದಲ್ಲಿ ಬಳಸಿರುವುದು ಹೊಸದು. ಕನ್ನಡ ಕಿರು ಚಿತ್ರದ ಪ್ರೊಮೋ ಟ್ರೇಲರನ್ನು 2.75 ಲಕ್ಷ ಮಂದಿ ವೀಕ್ಷಣೆ ಮಾಡಿರುವುದೂ ದಾಖಲೆ. ಇದೆಲ್ಲವೂ ಸೇರಿ 'ಸ್ಮೈಲ್‌ಗುರು' ಹೆಚ್ಚು ಜನಜನಿತವಾಯಿತು.

★ *ಬಣ್ಣಕ್ಕೆ ಒಲಿದಿದ್ದು ಹೇಗೆ?*

ಮೊದಲಿನಿಂದ ಡಾನ್ಸ್ ಹುಚ್ಚು ಹೆಚ್ಚಿತ್ತು. ಅದು ನನ್ನನ್ನು ಡಾನ್ಸ್ ಕಲಾವಿದನನ್ನಾಗಿ ರೂಪಿಸಿತು. ಸಿನಿಮಾಗಳಲ್ಲಿ ನಟರ ಹಿಂದೆ ನಿಂತು ಡಾನ್ಸ್ ಕಲಾವಿದನಾಗಿ ಕಾಣಿಸಿಕೊಳ್ಳುತ್ತಿದ್ದೆ. ಆದರೆ ನನಗೆ ಐಡೆಂಟಿಟಿ ಇರುತ್ತಿರಲಿಲ್ಲ. ಹೀಗಿರುವಾಗ ಇದ್ದಕ್ಕಿದ್ದಂತೆ ನಾನೂ ಏಕೆ ನಟನಾಗಬಾರದು? ಅನ್ನುವ ಪ್ರಶ್ನೆ ಕಾಡಲು ಶುರುವಾಯಿತು. ಆ ನಿಟ್ಟಿನಲ್ಲಿ ಪ್ರಶ್ನಿಸುತ್ತಿದ್ದವನ ಮನಸ್ಸಿನಲ್ಲಿ 'ಸ್ಮಾರ್ಟ್‌ಗುರು' ಸಿದ್ಧವಾಯಿತು. ಅಷ್ಟರಲ್ಲಿ 'ಪದ್ಮಾವತಿ' ಧಾರಾವಾಹಿಯಲ್ಲಿ ಪ್ರಮುಖ ಪಾತ್ರ ಸಿಕ್ಕಿತು. ಈಗ ದೊರೆತ ಅವಕಾಶವನ್ನು ಬಳಸಿಕೊಳ್ಳಬೇಕು.

★ *ನೀವೇಕೆ ವೈದ್ಯ ಆಗಲಿಲ್ಲ?*

ಬೆಂಗಳೂರು ವಿಶ್ವವಿದ್ಯಾಲಯ ಸಮೀಪದಲ್ಲಿ ನಮ್ಮ ಮನೆ ಇದೆ. ಅಪ್ಪ, ಅಮ್ಮ ಇಬ್ಬರೂ ವೈದ್ಯರು. ನನಗೆ ಬಾಲ್ಯದಲ್ಲಿಯೇ ಆ ವೃತ್ತಿ ಸಹಜವಾಗಿ ಆಕರ್ಷಿಸಿತ್ತು. ನಮ್ಮ ಬಂಧುಗಳು, ನೆರೆಹೊರೆಯವರೆಲ್ಲರೂ ನನ್ನನ್ನು ಡಾಕ್ಟರ್ ಎಂದೇ ಕರೆಯುತ್ತಿದ್ದರು. ಪಿಯುಸಿ ಓದುವ ಸಂದರ್ಭದಲ್ಲಿ ನನ್ನ ಗುರಿಗೆ ತಕ್ಕಷ್ಟು ಪ್ರಯತ್ನ ಸಾಲುತ್ತಿಲ್ಲ ಎನ್ನುವುದು ಗೊತ್ತಾದ ತಕ್ಷಣ ವೈದ್ಯನಾಗುವ ಆಶೆಯನ್ನು ಬಿಟ್ಟುಬಿಟ್ಟೆ. ಕ್ರಿಯಾಶೀಲತೆಯತ್ತ ಮನಸ್ಸು ತುಡಿತಾ ಇತ್ತು. ಅದರಿಂದಾಗಿ ಬಿಎಸ್ಸಿ ಅನಿಮೇಷನ್ ಮಾಡಿದೆ. ಓದಿನ ಅರಿವನ್ನೇ ನನ್ನ ಕಿರುಚಿತ್ರದಲ್ಲಿ ಪ್ರಯೋಗಿಸಿದೆ. ಸದ್ಯದಲ್ಲಿ ಚಿತ್ರವನ್ನು ಬಿಡುಗಡೆ ಮಾಡುವ ಉದ್ದೇಶ ಇದೆ. ಮುಂದೆಯೂ ಅನಿಮೇಷನ್ ತಂತ್ರಜ್ಞಾನದ ಸಿನಿಮಾ ಮಾಡುವ ಉದ್ದೇಶ ಇದೆ.

★ *ನಿಮ್ಮ ಆಸಕ್ತಿ ಯಾವುದರ ಮೇಲೆ ನೆಟ್ಟಿದೆ?*

ಬಣ್ಣದ ಲೋಕ ಪ್ರವೇಶಿಸುವ ಆರಂಭದಲ್ಲಿಯೇ ಕಿರುಚಿತ್ರವನ್ನು ನಿರ್ದೇಶಿಸಿ ನಟಿಸಿದ್ದೇನೆ. ನಿರ್ದೇಶನ ಮಾಡುವುದು ನನ್ನ ಆಸಕ್ತಿಯ ಕ್ಷೇತ್ರವಾಗಿದೆ. ಈಗ ಧಾರಾವಾಹಿಯಲ್ಲಿ ನಟಿಸುತ್ತಿದ್ದರೂ ನಿರ್ದೇಶನ ಕಲಿಕೆಯತ್ತ ಒಂದು ಕಣ್ಣು ಇಟ್ಟೇ ಇರುತ್ತೇನೆ. ಚಿತ್ರೀಕರಣದಲ್ಲಿ ನನ್ನ ಪಾತ್ರಕ್ಕೆ ಬಿಡುವು ಇದ್ದಾಗ ಸಹನಟರು ಅಭಿನಯಿಸುತ್ತಿರುತ್ತಾರೆ. ಆಗ ನಿರ್ದೇಶಕರ ಪಕ್ಕದಲ್ಲೇ ಕುಳಿತು ಗಮನಿಸುತ್ತೇನೆ. ಆ ಮೂಲಕ ಕಲಿಕೆಯ ಬಯಕೆಯನ್ನು ಈಡೇರಿಸಿಕೊಳ್ಳುತ್ತಿದ್ದೇನೆ. ಮುಂದೆ ನನ್ನಲ್ಲಿಯೂ ಒಬ್ಬ ಪಕ್ಕಾ ನಿರ್ದೇಶಕ ಬಲಗೊಳ್ಳುತ್ತಾನೆ ಎನ್ನುವ ವಿಶ್ವಾಸ ನನಗಿದೆ.

★ *ಧಾರಾವಾಹಿ ಅಥವಾ ಸಿನಿಮಾಗಳಿಗೆ ಏನು ಮುಖ್ಯ ಅಂತ ನಿಮಗೆ ಅನ್ನಿಸುತ್ತದೆ?*

ಗಿಮಿಕ್‌ಗಳು ನಡೆಯುವುದಿಲ್ಲ, ಕಥೆಯೇ ಮುಖ್ಯ. ಹಾಗೆಂದು ಕಥೆಗಳು ಹಳವಂಡಗಳ ಗಿರಗಿಟ್ಲೆ ಆಗಬಾರದು. ಬಹುತೇಕ ಕಥೆಗಳು ಪುನರಾವರ್ತನೆ ಆಗುತ್ತಿವೆ. ಪ್ರೀತಿ–ಪ್ರೇಮದ ಕಥನವನ್ನೇ ಬೇರೆ ಬೇರೆ ಆಯಾಮದಲ್ಲಿ ತೋರಿಸಲಾಗುತ್ತಿದೆ. ಕಥೆ ಭಿನ್ನವಾಗಿ ಇರಬೇಕು. ಭಿನ್ನತೆಯೇ ಸೃಜನಶೀಲತೆಯ ಜೀವಾಳ. ಪ್ರಯೋಗಶೀಲ ಗುಣ ಕಥೆಗಳಲ್ಲಿ ಇರಬೇಕಾಗುತ್ತದೆ. ಯಾವುದೇ ಕಾರಣಕ್ಕೂ ಕಥೆ ಎನ್ನುವುದು ವಾಸ್ತವಕ್ಕೆ ದೂರ ಆಗಿರಬಾರದು. ಅನುಭವ ಜನ್ಯ ಆಗಿರಬೇಕು. ಒಬ್ಬ ಸಾಮಾನ್ಯ ವೀಕ್ಷಕನಿಗೂ ಅದು ನೈಜ ಅನುಭವಕ್ಕೆ ದಕ್ಕಿದಂತೆ ಅನ್ನಿಸಬೇಕು. ಮೂಲದಲ್ಲಿ ಕಥೆ ಇಷ್ಟ ಆಗುವಂತೆ ಇದ್ದರೆ ಕಲೆ, ಸಿನಿಮೀಯ ತಂತ್ರಗಾರಿಕೆ ನಂತರದ ಹಂತದಲ್ಲಿ ಬರುತ್ತವೆ. ಸಿನಿಮಾಗಳಿಗೆ ಕಥೆಯೇ ತಳಪಾಯ ಆದ್ದರಿಂದ ಕಥೆಯ ಮೇಲೆಯೇ ಸಿನಿಮಾ ನಿಂತಿರುತ್ತದೆ. ಸಿನಿಮಾ ಪ್ಯಾಶನ್ ಆಗಿರುವುದರಿಂದ ಅದಕ್ಕೆ ಏನು ಅಗತ್ಯವೋ ಅದರ ತಯಾರಿ ನಡೆಸಿದ್ದೇನೆ. ಒಬ್ಬ ನಟನಾಗಿ ದೈಹಿಕವಾಗಿಯೂ ಸಿದ್ಧಗೊಳ್ಳುತ್ತಿದ್ದೇನೆ. ಎಂಟು ತಿಂಗಳ ಒಳಗಾಗಿ ದೊಡ್ಡ ಸಿನಿಮಾ ಸಿದ್ಧವಾಗುತ್ತದೆ.

■ **ರಾಘವೇಂದ್ರ**

